ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/03/ಎಸ್‌ಸಿಹೆಚ್(2)/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣಾ ಇಲಾಖೆ,
ಬೆಂಗಳೂರು-560 001.
ದಿನಾಂಕ: 03-12-2014.

-:: ಸುತ್ತೋಲೆ ::-

ವಿಷಯ:- ಕರ್ನಾಟಕ ರಾಜ್ಯದ ಕೇಂದ್ರಿಕೃತ ಪ್ರವೇಶ ಘಟಕದ (Online Interactive Counselling Nodal Centre), ಮೂಲಕ ಪ್ರವೇಶ ಪಡೆದು ಖಾಸಗಿ ಅನುದಾನಿತ/ಅನುದಾನರಹಿತ (Online Interactive Counselling Nodal Centre ಗೆ ಸಂಸ್ಥೆಯವರು ಸೀಟುಗಳನ್ನು ಬಿಟ್ಟು ಕೊಟ್ಟಿದ್ದು, ಅಂತಹ ಸೀಟುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರುವವರಿಗೆ ಮಾತ್ರ) ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ **2014-15ನೇ** ಸಾಲಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್/229/ಬಿಸಿಎ/80, ದಿ: 16-12-1982.
2. ಸರ್ಕಾರದ ಆದೇಶ ಸಂಖ್ಯೆ: ಇಡಿ/116/ಟಿಪಿಇ/97,ದಿ:17-6-2000.
3. ಸರ್ಕಾರದ ಆದೇಶ ಸಂ. ಸಕಇ 137 ಪವಯೋ 2011, ದಿ:08-08-2011.
4. ಸರ್ಕಾರದ ಆದೇಶ ಸಂ: ಸಕಇ 80 ಪಕವಿ 2013, ದಿ: 02-07-2013.

**000000000**

1. **ಕರ್ನಾಟಕ ರಾಜ್ಯದ ಕೇಂದ್ರಿಕೃತ ಪ್ರವೇಶ ಘಟಕದ** (Online Interactive Counselling Nodal Centre), **ಮೂಲಕ ಪ್ರವೇಶ ಪಡೆದು** ಖಾಸಗಿ ಅನುದಾನಿತ/ಅನುದಾನರಹಿತ (Online Interactive Counselling Nodal Centre ಗೆ ಸಂಸ್ಥೆಯವರು ಸೀಟುಗಳನ್ನು ಬಿಟ್ಟು ಕೊಟ್ಟಿದ್ದು, ಅಂತಹ ಸೀಟುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರುವವರಿಗೆ ಮಾತ್ರ) ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕರ್ನಾಟಕದ ವಿದ್ಯಾರ್ಥಿಗಳಿಗೆ **2014-15ನೇ** ಸಾಲಿನಲ್ಲಿ ಶುಲ್ಕ ವಿನಾಯಿತಿಗಾಗಿ ಅರ್ಜಿಯನ್ನು ಕರೆಯಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಇಲ್ಲದಿದ್ದರೆ **ಉಲ್ಲೇಖ(5)ರಂತೆ ಸಮಾಜ ಕಲ್ಯಾಣ ಇಲಾಖೆಯಿಂದ/ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶಾನಾಲಯದಿಂದ 2013-14ನೇ ಸಾಲಿಗೆ ಅನ್ವಯವಾಗುವಂತೆ ಕುಟುಂಬದ ವಾರ್ಷಿಕ ಆದಾಯ ₹2,00,000/- ರಿಂದ ₹2,50,000/- ಹೆಚ್ಚಿಸಿ ಪರಿಷ್ಕರಿಸಿರುವುದರಿಂದ ಈ ಮೊತ್ತವನ್ನು ಮೀರಿರುವ ಮತ್ತು ಯಾವುದೇ ವಿದ್ಯಾರ್ಥಿ ವೇತನ ಪಡೆಯದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಈ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ.**

2. ಖಾಸಗಿ ಅನುದಾನಿತ/ಅನುದಾನರಹಿತ (Online Interactive Counselling Nodal Centre ಗೆ ಸಂಸ್ಥೆಯವರು ಸೀಟುಗಳನ್ನು ಬಿಟ್ಟು ಕೊಟ್ಟಿದ್ದು, ಅಂತಹ ಸೀಟುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರುವವರಿಗೆ ಮಾತ್ರ) ಪಾಲಿಟೆಕ್ನಿಕ್‌ಗಳ ಸೂಚನಾ ಫಲಕದಲ್ಲಿ ವಿದ್ಯಾರ್ಥಿಗಳಿಗೆ ಅರ್ಜಿಯನ್ನು ಸಲ್ಲಿಸುವಂತೆ ಪ್ರಕಟಿಸಬೇಕು. ಪಾಲಿಟೆಕ್ನಿಕ್‌ನ ಆಯಾಯ ವಿಷಯದ ವಿಭಾಗದ ಮುಖ್ಯಸ್ಥರ ಮೂಲಕ ಅಥವಾ ಸೂಕ್ತವಾದ ರೀತಿಯಲ್ಲಿ ಪ್ರತಿ ವಿದ್ಯಾರ್ಥಿಯ ಗಮನಕ್ಕೆ ತಪ್ಪದೇ ಮಾಹಿತಿ ತಲುಪುವ ರೀತಿಯಲ್ಲಿ ಪ್ರಿನ್ಸಿಪಾಲರು ಸೂಕ್ತ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳಿಗೆ ಮಾಹಿತಿ ಸಿಗದೇ, ಅರ್ಜಿ ಹಾಕಲು ಸಾಧ್ಯವಾಗಲಿಲ್ಲ ಎಂಬ ದೂರು ವಿದ್ಯಾರ್ಥಿಗಳಿಂದ ಬಾರದ ರೀತಿಯಲ್ಲಿ ಎಚ್ಚರವಹಿಸತಕ್ಕದ್ದು.

3. ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿಗೆ ಪೂರ್ಣವಾಗಿ ತುಂಬಿದ ಅರ್ಜಿಯನ್ನು ದ್ವಿ-ಪ್ರತಿಯಲ್ಲಿ ಪಡೆಯಬೇಕು. ಅರ್ಜಿಯ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ನಿಗಧಿಪಡಿಸಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಗಳ ದೃಢೀಕರಣದೊಂದಿಗೆ, ಹಾಗೂ ಈ ಪತ್ರದಲ್ಲಿ ತಿಳಿಸಿದ ಇತರೆ ದಾಖಲೆಗಳನ್ನು ಲಗತ್ತಿಸಿರಬೇಕು. ಒಂದು ಪ್ರತಿಯನ್ನು ಪಾಲಿಟೆಕ್ನಿಕ್ ಕಛೇರಿಯಲ್ಲಿ ದಾಖಲಾತಿಗೆ ಇಟ್ಟುಕೊಂಡು,

ಮೂಲ ಅರ್ಜಿ (ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ) ಹಾಗೂ ಇತರೆ ಪ್ರಮಾಣ ಪತ್ರವನ್ನು ಗೆಜೆಟೆಡ್ ಅಧಿಕಾರಿಗಳ ದೃಢೀಕರಿಸಿ ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು.

4. ಅರ್ಹ ವಿದ್ಯಾರ್ಥಿಗಳಿಂದ ಪಾಲಿಟೆಕ್ನಿಕ್ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಸಲ್ಲಿಸಲು ಅಂತಿಮ **ದಿನಾಂಕ: 25-12-2014**ರೊಳಗೆ ನಿಗಧಿಪಡಿಸಲಾಗಿದೆ. ನಿಗಧಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಬಾರದು. ಹಿಂದಿನ ಸಾಲಿಗೆ ಸಂಬಂಧಿಸಿದಂತೆ, ಶುಲ್ಕ ವಿನಾಯಿತಿಯ ಪ್ರಸ್ತಾವನೆಗಳನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲಾಗುವುದಿಲ್ಲ. ಅದ್ದರಿಂದ ಈ ರೀತಿಯ ಪ್ರಸ್ತಾವನೆಗಳನ್ನು ಕಳುಹಿಸಬಾರದು.

5. ಶುಲ್ಕ ವಿನಾಯಿತಿಗೆ ಅರ್ಹತೆ ಹೊಂದಿರುವ ಪ್ರಸ್ತಾವನೆಗಳನ್ನು ಮಂಜೂರಾತಿಗೆ ಕಳುಹಿಸುವ ಮೊದಲು ಕೂಲಂಕಷವಾಗಿ ಕೆಳಗೆ ನೀಡಿರುವ ಸೂಚನೆಯ ಅನುಸಾರ ಪರಿಶೀಲಿಸಿ ವಿದ್ಯಾರ್ಥಿಗಳ ಅರ್ಜಿ ಮತ್ತು ಅಗತ್ಯವಾದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಕಳುಹಿಸಿಕೊಡಬೇಕು.

(1). ವಿದ್ಯಾರ್ಥಿಗಳು ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಬೇಕು.

(2). ವಿದ್ಯಾರ್ಥಿಗಳು ನಿಗಧಿಪಡಿಸಿರುವ ಪರಿಷ್ಕರಿಸಿದ ಅರ್ಜಿ ನಮೂನೆ-1 ರಲ್ಲಿಯೇ ಮಾಹಿತಿ ತುಂಬಿ ಸಲ್ಲಿಸಬೇಕು.

(3). **2014-15ನೇ** ಸಾಲಿನಲ್ಲಿ ಪ್ರಥಮ ವರ್ಷ ಡಿಪ್ಲೋಮಾಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು **ಕೇಂದ್ರಿಕೃತ ಪ್ರವೇಶ ಘಟಕದಲ್ಲಿ (Online Interactive Counselling Nodal Centre), ಪ್ರವೇಶ ಪಡೆದ ಬಗ್ಗೆ ಸೀಟು ಹಂಚಿಕೆ ಪತ್ರ (Admission Order copy) ಲಗತ್ತಿಸಿರಬೇಕು.** ಹೊಸದಾಗಿ ಶುಲ್ಕ ವಿನಾಯಿತಿಗೆ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಅವಧಿಯಲ್ಲಿ ಕನಿಷ್ಟ ಐದು ಶೈಕ್ಷಣಿಕ ವರ್ಷಗಳ (10ನೇ ತರಗತಿ ಸೇರಿ) ಅವಧಿಯಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. 2013-14ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು, ಪ್ರಸಕ್ತ ಸಾಲಿನಲ್ಲಿ 2ನೇ ವರ್ಷ/3ನೇ ಸೆಮಿಸ್ಟರ್ ಮತ್ತು 2012-13ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು 3ನೇ ವರ್ಷ/5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡತ್ತಿದ್ದು, ಅಂತಹ ವಿದ್ಯಾರ್ಥಿಗಳು ಅಂಕಪಟ್ಟಿಗಳ ಜೊತೆಗೆ ಅರ್ಜಿ ಸಲ್ಲಿಸವುದು.

(4). ಜಾತಿ ಪರಿಶೀಲಿಸಿದ ಅಥವಾ ಸಿಂಧುತ್ವ ಪ್ರಮಾಣ ಪತ್ರದ ಪ್ರತಿಯನ್ನು ಸಹ ಕಡ್ಡಾಯವಾಗಿ ಸಲ್ಲಿಸಬೇಕು.

(5). ನವೀಕರಣವಾಗಿದ್ದ ಪಕ್ಷದಲ್ಲಿ **2ನೇ ವರ್ಷ** (**3ನೇ ಸೆಮಿಸ್ಟರ್**)/**3ನೇ ವರ್ಷ** (**5ನೇ ಸೆಮಿಸ್ಟರ್**) ಹಿಂದಿನ ವರ್ಷದ ಮಂಜೂರಾತಿಯ ಆದೇಶ ಕ್ರಮಾಂಕ ಮತ್ತು ದಿನಾಂಕ ನಮೂದಿಸಿರಬೇಕು. ನವೀಕರಣ ಕೋರಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹಿಂದಿನ ಮಂಜೂರಾತಿಯ ಆದೇಶ ಮತ್ತು ಅನುಬಂಧದ ಪ್ರತಿಯನ್ನು ಪಾಲಿಟೆಕ್ನಿಕ್ ಕಛೇರಿಯವರು ಪ್ರಸ್ತಾವನೆಯೊಂದಿಗೆ ಲಗತ್ತಿಸಿರಬೇಕು.

(6). ವಿದ್ಯಾರ್ಥಿಯು ಡಿಪ್ಲೋಮಾ ವ್ಯಾಸಂಗದ ಅವಧಿಯಲ್ಲಿ ವ್ಯಾಸಂಗವನ್ನು ಮೊಟಕುಗೊಳಿಸಿದ ಸಂದರ್ಭದಲ್ಲಿ ಶುಲ್ಕ ವಿನಾಯಿತಿಯನ್ನು ಪಡೆಯಲು ಅರ್ಹತೆ ಹೊಂದಿರುವುದಿಲ್ಲ.

(7). ವಿದ್ಯಾರ್ಥಿಯ ತಂದೆ/ತಾಯಿ, ಪೋಷಕರು ಸರ್ಕಾರಿ/ಸರ್ಕಾರದ ಉದ್ದಿಮೆ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರ ಮೇಲಾಧಿಕಾರಿಗಳಿಂದ ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಪತ್ರಾಂಕಿತ ಅಧಿಕಾರಿಗಳಾಗಿದ್ದಲ್ಲಿ ಎ.ಜಿ (ಮಹಾ ಲೇಖಾಪಾಲರು) ಕಛೇರಿಯವರು ನೀಡಿರುವ ಪೇ-ಸ್ಲಿಪ್‌ನ (ಸಂಬಳದ ಚೀಟಿ) ಪ್ರತಿಯನ್ನು ನೀಡಬಹುದು. ಖಾಸಗಿ ಮತ್ತು ಸ್ವಉದ್ಯೋಗದಲ್ಲಿರುವವರು ಸಂಬಂಧ ಪಟ್ಟ ತಹಸೀಲ್ದಾರ್‌ರಿಂದ ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಪಿಂಚಣಿದಾರರು ಪಿಂಚಣಿ ಆದೇಶದ ಪ್ರತಿ ಅಥವಾ ಖಜಾನೆಯ ಪುಸ್ತಕದಲ್ಲಿ ನಮೂದಿಸಿರುವ ಪಂಚಣಿ ಪಾವತಿಯ ವಿವರದ ಪ್ರತಿ ಅಥವಾ ಪಿಂಚಣಿಯನ್ನು ಬ್ಯಾಂಕಿನಿಂದ ಪಡೆಯುತ್ತಿದ್ದರೆ ಆ ಬ್ಯಾಂಕಿನ ಮ್ಯಾನೇಜರ್‌ರವರಿಂದ ಪಿಂಚಣಿ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

(8). ವಿದ್ಯಾರ್ಥಿಯ ಸದ್ವರ್ತನೆ ಹಾಗೂ ನಿಯತಕಾಲಿಕ ಹಾಜರಾತಿಯನ್ನು ಗಮನಿಸಿ ಪ್ರತಿಯೊಂದಿಗೆ ವಿದ್ಯಾರ್ಥಿಯ ಅರ್ಜಿಯಡಿಯಲ್ಲಿ ಪ್ರಿನ್ಸಿಪಾಲರು ಲಿಖಿತವಾಗಿ ಶಿಫಾರಸ್ಸು ಮಾಡಿ ತಪ್ಪದೇ ಸಹಿಮಾಡಿ ಮೊಹರು ಹಾಕಿರಬೇಕು.